

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಚರ್ಯೆಗಳನ್ನು ಲಿಖಿತ ರೂಪದಲ್ಲಿ ಸಂಗ್ರಹಿಸಿಡಬೇಕಾದುದು ಅತೀ ಅಗತ್ಯವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18-09-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೇವಕನಾಗಿ ಇಸ್ಲಾಮ್ ಧರ್ಮದ ಪುನಶ್ಚೇತನಕ್ಕೋಸ್ಕರ ಕಳುಹಿಸಿರುವನು. ಅವರು ನಮಗೆ ಧರ್ಮದ ಯಥಾರ್ಥ ರೂಪವನ್ನು, ಅದರ ಅಸ್ತಿಭಾರವನ್ನು, ಅವರ ವಾಸ್ತವಿಕ ಉಪದೇಶಗಳನ್ನು ಅಂದಗೊಳಿಸಿ ತೋರಿಸಿಕೊಟ್ಟರು. ನವೀನ ಆಚಾರಗಳನ್ನೂ ತಪ್ಪು ಸಂಪ್ರದಾಯಗಳನ್ನೂ ದೂರಸರಿಸಲು ಉಪದೇಶಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳ ಮತ್ತು ಉತ್ತಮ ನಡೆವಳಿಕೆಗಳ ವಾಸ್ತವಿಕ ಉದಾಹರಣೆಯಾಗಿರುವರು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಡೆವಳಿಕೆಗಳು ನಮಗೆ ಮಾರ್ಗದೀಪಗಳಾಗಿವೆ. ನಮ್ಮ ಹಿರಿಯರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರು ಆ ಮಹಾತ್ಮರಿಗೆ ಸಂಬಂಧಿಸಿದ ವರದಿಗಳನ್ನು ನಮಗೆ ತಲಪಿಸಿರುವುದು ನಮಗೆ ದೊರೆತ ಭಾಗ್ಯವಾಗಿದೆ. ಹಳೆಯ ಅಹ್ಮದಿಯರಲ್ಲಿ ಹಲವರು ತಮ್ಮ ಹಿರಿಯರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಘಟನೆಗಳನ್ನು ನೇರವಾಗಿ ಆಲಿಸಿರಬಹುದು. ಆ ಹಿರಿಯರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡಿದ್ದರು ಮತ್ತು ಅವರ ಜೊತೆ ಇರಲು ಭಾಗ್ಯಗಳಿಸಿದವರಾಗಿದ್ದರು. ಆ ಹಿರಿಯರು ನೀಡಿದ ವರದಿಗಳ ಮಹತ್ವದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿರುವರು. ಮತ್ತು ತಮ್ಮ ಅಂದಾಜು ಪ್ರಕಾರ ಅವುಗಳಿಂದ, ಅವು ಬಾಹ್ಯವಾಗಿ ಚಿಕ್ಕ ವಿಷಯ ಎಂದು ತೋರುತ್ತಿದ್ದರೂ, ಅವುಗಳಿಂದ ಉಪದೇಶವನ್ನು ನಿಷ್ಕರ್ಷಿಸಿದರು ಮತ್ತು ಇಸ್ಲಾಮಿನ ಮೂಲತತ್ವಗಳನ್ನು ವಿವರಿಸಿದರು. ಅವುಗಳನ್ನು ನಾನು ಈಗ ನಿಮ್ಮ ಮುಂದೆ ಇರಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಅನೇಕ ಸಹಾಬರು ಜೀವಿಸಿದ್ದರು. ಆ ಸಹಾಬರೊಂದಿಗೆ ಮತ್ತು ಅವರ ಸಂಬಂಧಿಕರೊಂದಿಗೆ ಅವರು ಹೇಳಿದ್ದರು ಆ ಘಟನೆಗಳನ್ನು ದಾಖಲಿಸಬೇಕೆಂದು. ಅವುಗಳು ಮುಂದಿನ ಪೀಳಿಗೆಗಳಿಗೆ ವಾಸ್ತವಿಕ ತತ್ವಗಳನ್ನು ಕಲಿಸುವುವು ಎಂದೂ ಕೆಲವು ಸಮಸ್ಯೆಗಳಿಗೆ ಪರಿಹಾರ ಲಭಿಸುವುದೂ ಎಂದೂ ಹೇಳಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಹೀಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಘಟನೆಗಳನ್ನು ಮತ್ತು ಅವರ ಉಪದೇಶಗಳನ್ನು ಸಹಾಬರಿಂದ ತಿಳಿದುಕೊಂಡು ಸಂಗ್ರಹಿಸಬೇಕೆಂದು ನಾನು ಈ ವರ್ಷ ಜಮಾಅತ್‌ನೊಂದಿಗೆ ವಿಶಿಷ್ಟವಾಗಿ ಹೇಳಿದ್ದೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಚಿಕ್ಕಪುಟ್ಟ ವಿಷಯಗಳನ್ನು ಸಹ ಅಡಗಿಸಿಡುವುದು ಮತ್ತು ಅನ್ಯರಿಗೆ ತಿಳಿಸದಿರುವುದು ನಾವು ಸಮುದಾಯಕ್ಕೆ ಮಾಡುವ ವಂಚನೆಯಾಗಿದೆ. ಕೆಲವು ವಿಷಯಗಳು ಅತಿ ಚಿಕ್ಕದಾಗಿದ್ದರೂ ಪರಿಣಾಮದ ದೃಷ್ಟಿಯಲ್ಲಿ ಅವು ಬಹಳ ಮುಖ್ಯವಾಗಿರುತ್ತವೆ. ಹದೀಸಿನಲ್ಲಿ ಎಷ್ಟು ಚಿಕ್ಕ ಚಿಕ್ಕ ವಿಷಯಗಳು ನಮೂದಿಸಲ್ಪಟ್ಟಿವೆ. ಉದಾಹರಣೆಗೆ ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಕುಂಬಳಕಾಯಿಯ ಸಾರು ಮಾಡಲಾಗಿತ್ತು. ಅವರು ಸಾರಿನಿಂದ ಅದರ ತುಂಡುಗಳನ್ನು ತೆಗೆದು ತೆಗೆದು ತಿನ್ನುತ್ತಾ ಇದ್ದರು. ಹಾಗೆ ಸಾರಿನಲ್ಲಿದ್ದ ಎಲ್ಲಾ ತುಂಡುಗಳು ಖಾಲಿಯಾದವು. ಆಗ ಅವರು ಹೇಳಿದರು: ಕುಂಬಳಕಾಯಿ ಬಹಳ ಉತ್ತಮ ವಸ್ತುವಾಗಿದೆ ಎಂದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಬಾಹ್ಯವಾಗಿ ಇದೊಂದು ಸಾಮಾನ್ಯ ವಿಷಯವೆಂದು ತೋರಬಹುದು. ಅನೇಕ ಅಹ್ಮದಿಯರು ಸಹ ಹೇಳಬಹುದು– ಕುಂಬಳಕಾಯಿಯ ಪ್ರಸ್ತಾಪ ಏಕೆಂದು. ಇಂದಿನ ಕಾಲದಲ್ಲಿ ವಿದ್ಯಾಭ್ಯಾಸ ಗಳಿಸಿದವರು ಇಂತಹ ವಿಷಯಗಳ ಬಗ್ಗೆ ನಿರ್ಲಕ್ಷ್ಯ ಹೊಂದುತ್ತಾರೆ. ಅಥವಾ ಅವರು ಇದು ಸಾಮಾನ್ಯ ವಿಷಯವೆಂದು ಕಡೆಗಣಿಸುತ್ತಾರೆ. ಆದರೆ ಇಂತಹ ಚಿಕ್ಕ ವಿಷಯಗಳಿಂದ ಇಸ್ಲಾಮಿಗೆ ಎಷ್ಟೊಂದು ಪ್ರಯೋಜನ ಲಭಿಸಿದೆ ಎಂದು ನೋಡಿರಿ. ಹಿಂದೆ ಮುಸ್ಲಿಮರಲ್ಲಿ ಜಾರಿಗೊಂಡಿದ್ದ ಕೆಡುಕುಗಳ ಅಂದಾಜು ಈಗ ನಾವು ಮಾಡಲಾರೆವು. ಒಂದು ಕಾಲದಲ್ಲಿ ಹಿಂದೂಸ್ಥಾನದಲ್ಲಿ ಹಿಂದುಗಳ ಸಂಸ್ಕೃತಿ ಮುಸ್ಲಿಮರ ಮೇಲೆ ಪ್ರಭಾವ ಉಂಟುಮಾಡಿತ್ತು. ಈ ಪ್ರಭಾವದ ಕಾರಣದಿಂದ ಮುಸ್ಲಿಮರು ಹೀಗೆ ಯೋಚಿಸಲು ತೊಡಗಿದರು: ಸಾತ್ವಿಕರಾದ ಜನರು ಒಳ್ಳೆಯ ವಸ್ತುಗಳನ್ನು ತಿನ್ನಬಾರದು ಎಂದು. ಉತ್ತಮ ಆಹಾರಗಳನ್ನು ತಿನ್ನಬಾರದು, ಒಳ್ಳೆಯ ಜನರು ಹೀಗೆಯೇ ಮಾಡುತ್ತಾರೆ, ಫಕೀರರೂ ಯೋಗಿಗಳೂ ಹೀಗೆಯೇ ಮಾಡಬೇಕಾಗಿದೆ. ಯಾರಾದರೂ ಉತ್ತಮ ಆಹಾರ ಪದಾರ್ಥ ತಿನ್ನುವುದನ್ನು ಕಂಡಾಗ ಅಂತಹ ವ್ಯಕ್ತಿ ಆಧ್ಯಾತ್ಮಿಕವಾಗಿ ಹಿರಿಯ ಸ್ಥಾನ ಹೇಗೆ ಪಡೆಯಲು ಸಾಧ್ಯ ಎಂದು ಅವರು ಹೇಳುತ್ತಿದ್ದರು. ಅಂತಹ ವ್ಯಕ್ತಿ ಆಧ್ಯಾತ್ಮಿಕವಾಗಿ ಶ್ರೇಷ್ಠ ಸ್ಥಾನ ಗಳಿಸಿದವನಾಗಬಲ್ಲ ಎಂಬ ಕಲ್ಪನೆಯೇ ಅವರಿಗಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ಒಮ್ಮೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಖಾದಿಯಾನಿನ ಮಸ್‌ಜಿದ್ ಅಖ್ಸಾದಲ್ಲಿ ದರ್ಸ್ ನೀಡಿದ ನಂತರ ಮನೆಗೆ ಮರಳಿ ಹೋಗುತ್ತಿದ್ದಾಗ ಅವರು ಒಬ್ಬ ನಿವೃತ್ತ ಸರಕಾರಿ ಅಧಿಕಾರಿಯನ್ನು ಕಂಡರು ಅವರು ತನ್ನ ಮನೆಯ ಹೊರಗೆ ಕುಳಿತ್ತಿದ್ದರು. ಆತ ಹಿಂದು ಆಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪಲಾವ್ ತಿನ್ನುತ್ತಾರೆಂದೂ ಬಾದಾಮ್, ತುಪ್ಪ ತಿನ್ನುತ್ತಾರೆ ಎಂದೂ ಯಾರೋ ಆ ಅಧಿಕಾರಿಯೊಂದಿಗೆ ಹೇಳಿದ್ದರಂತೆ. ಅಂದರೆ ಆ ವಸ್ತುಗಳು ಲಭಿಸಿದರೆ ಅವುಗಳನ್ನು ಸೇವಿಸುತ್ತಿದ್ದರು ಎಂದು. ಆ ಅಧಿಕಾರಿ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಡನೆ ಹೇಳಿದರು– 'ಮೌಲವಿ ಸಾಹೇಬ್, ತಮ್ಮೊಂದಿಗೆ ಒಂದು ವಿಷಯ ಕೇಳಬೇಕಾಗಿದೆ. ಬಾದಾಮ್,

ತುಪ್ಪ ಪಲಾವ್ ಮೊದಲಾದವುಗಳನ್ನು ತಿನ್ನುವುದು ಅನುವದನೀಯವೇ?' ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ನಮ್ಮ ಧರ್ಮದಲ್ಲಿ ಇವುಗಳನ್ನು ತಿನ್ನುವುದು ಅನುಮತಿಸಲಾಗಿದೆ. ಆಗ ಆ ಅಧಿಕಾರಿ ಹೇಳಿದರು: ನಾನು ಕೇಳಲು ಉದ್ದೇಶಿಸಿದ್ದು ಫಕೀರರು ಸಂತರು ಮೊದಲಾದವರು ಅವುಗಳನ್ನು ತಿನ್ನಬಹುದೇ ಎಂದು. ಆಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು: ಫಕೀರರು ಮತ್ತು ಧಾರ್ಮಿಕ ಹಿರಿಯರು ಮತ್ತು ಎಲ್ಲರಿಗೂ ಅವುಗಳು ಅನುಮತಿಸಲ್ಪಟ್ಟಿವೆ ಎಂದು ಹೇಳಿದರು. ಆಗ ಆ ಹಿಂದೂ ಅಧಿಕಾರಿ 'ಒಳ್ಳೆಯದು' ಎಂದು ಹೇಳಿ ಮೌನವಾದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಆ ವ್ಯಕ್ತಿಯು ಇದೊಂದು ಬಹಳ ದೊಡ್ಡ ಆರೋಪವೆಂದು ಯೋಚಿಸಿರಬಹುದು. ಪಲಾವ್, ಬಾದಾಮ್, ತುಪ್ಪ ಮೊದಲಾದವುಗಳನ್ನು ತಿನ್ನುವ ಮಿರ್ಝಾ ಸಾಹೇಬರು ಮಸೀಹ್ ಮತ್ತು ಮಹ್‌ದಿ ಆಗುವುದು ಹೇಗೆ? ಈಗಿನ ಕಾಲದ ಅಹ್ಮದಿಯರ ಹಾಗೆ ಮನೋಭಾವವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಹೊಂದಿರುತ್ತಿದ್ದರೆ ಅವರು ಕುಂಬಳಕಾಯಿ ಸಾರಿನ ಬಗ್ಗೆ ಪ್ರಸ್ತಾಪಿಸುತ್ತಿರಲಿಲ್ಲ. ಆದರೆ ಈ ಪ್ರಸ್ತಾಪ ಮಾಡದಿರುತ್ತಿದ್ದರೆ ಬಹಳ ಮುಖ್ಯವಾದ ಒಂದು ವಿಷಯ ನಮಗೆ ಲಭಿಸದೆ ಹೋಗುತ್ತಿತ್ತು. ಮತ್ತೊಂದು ಹದೀಸಿನಲ್ಲಿ ಈರೀತಿ ಉಲ್ಲೇಖವಿದೆ: ಒಮ್ಮೆ ಜುಮುಅ ನಮಾಝಿಗೋಸ್ಕರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೆಲೆಬಾಳುವ ನಿಲುವಂಗಿ ಧರಿಸಿ ಬಂದಿದ್ದರು. ಈ ಕಾಲದಲ್ಲಿ ಒಬ್ಬನು, 'ಒಳ್ಳೆಯ ಬಟ್ಟೆ ಧರಿಸದೆ ಇರುವುದು ಧಾರ್ಮಿಕ ಹಿರಿಯರ ಮತ್ತು ಸಾತ್ವಿಕರ ಲಕ್ಷಣವಾಗಿದೆ' ಎಂದು ಹೇಳಿದರೆ ನಾವು ಈ ಹದೀಸನ್ನು ತೋರಿಸಿ ಹೇಳಬಹುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅ ದಿನ ಬಹಳ ಚೆನ್ನಾಗಿ ಸ್ವಚ್ಛತೆಯನ್ನು ಕಾಪಾಡುತ್ತಿದ್ದರು, ಉತ್ತಮ ಬಟ್ಟೆ ಧರಿಸುತ್ತಿದ್ದರು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವಚ್ಛತೆ ಬಗ್ಗೆ ಎಷ್ಟು ನಿಗಾವಹಿಸುತ್ತಿದ್ದರೆಂದರೆ ಕೆಲವು ಸೂಫೀ ಸಂತರು ಶಾಹ್ ವಲಿಯುಲ್ಲಾಹ್ ಮುಹದ್ದಿಸ್ ದೆಹ್ಲವಿಯ ಹಾಗೆ ಪ್ರತಿ ದಿನ ಹೊಸ ಬಟ್ಟೆ ಅಥವಾ ಒಗೆದ ಬಟ್ಟೆ ಧರಿಸುತ್ತಿದ್ದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಬಹಳ ಸರಳ ಸ್ವಭಾವಗುಣ ಹೊಂದಿದವರಾಗಿದ್ದರು. ಅವರಿಗೆ ಬಹಳ ಕೆಲಸ ಮಾಡಲಿಕ್ಕಿದ್ದುದರಿಂದ ಕೆಲವು ವಿಷಯಗಳ ಬಗ್ಗೆ ಗಮನ ಹರಿಸುತ್ತಿರಲಿಲ್ಲ. ಕೆಲವು ಸಾರಿ ಜುಮುಅ ದಿನ ಸ್ನಾನ ಮಾಡಲು ಮತ್ತು ಬಟ್ಟೆ ಬದಲಾಯಿಸುವುದು ಸಹ ಮರೆತು ಬಿಡುತ್ತಿದ್ದರು. ಇದು ಅವರ ಸರಳ ಸ್ವಭಾವದ ಕಾರಣದಿಂದ ಹೊರತು ಧಾರ್ಮಿಕ ಹಿರಿಯರು ಹೀಗೆ ಮಾಡುವುದು ಆವಶ್ಯಕ ಎಂಬ ಉದ್ದೇಶದಿಂದಾಗಿರಲಿಲ್ಲ. ಆದರೆ ನಮ್ಮ ಈ ಕಾಲದಲ್ಲಿ ಸೂಫಿಯಾದವನು ಕೊಳಕನಾಗಿರಬೇಕು ಎಂದು ಅರ್ಥ ಮಾಡಲಾಗುತ್ತಿದೆ. ಎಷ್ಟು ಹೆಚ್ಚು ಕೊಳಕನಾಗಿರುವನೋ ಅವನು ಅಷ್ಟು ಹೆಚ್ಚಿಗೆ ದೇವದಾಸನಾಗುತ್ತಾನೆಂದು ಭಾವಿಸಲಾತ್ತಿದೆ. ಆದರೆ ವಾಸ್ತವದಲ್ಲಿ ಮನುಷ್ಯನು ಎಷ್ಟು ಕೊಳಕನಾಗುತ್ತಾನೋ ಅಷ್ಟು ಹೆಚ್ಚಿಗೆ ಅಲ್ಲಾಹನಿಂದ ದೂರ ಸರಿದಿರುತ್ತಾನೆ. ಇದೇ ಕಾರಣದಿಂದ ನಮ್ಮ ಶರೀಅತ್ (ನ್ಯಾಯಸಂಹಿತೆ) ಸ್ನಾನ ಮಾಡುವುದು ಕಡ್ಡಾಯವೆಂದು ಹೇಳಿದೆ. ಸುವಾಸನೆ ಹಚ್ಚಲು ಹೇಳಿದೆ. ದುರ್ವಾಸನೆ ಬೀರುವ ವಸ್ತುಗಳನ್ನು ತಿಂದು ಜನರ ಮಧ್ಯೆ ಬರುವುದನ್ನು ನಿಷಿದ್ಧ ಗೊಳಿಸಿದೆ. ಮಸ್‌ಜಿದ್‌ಗೆ ಅಂತಹವರು ಹೋಗುವುದನ್ನು ಸಹ ನಿಷೇಧಿಸಲಾಗಿದೆ. ಒಟ್ಟಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತದ ಸ್ಥಿತಿಗತಿಗಳನ್ನು ಅರಿತುಕೊಂಡು ಲೋಕ ಲಾಭ ಪಡೆಯುತ್ತಾ ಇರುತ್ತದೆ. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವನ ಶೈಲಿಯಿಂದ ಸಹ ಲೋಕ ಲಾಭವನ್ನು ಪಡೆಯುವುದು. ಆದುದರಿಂದ ಅವುಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಬೇಕಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನನ್ನೊಂದಿಗೆ ಒಬ್ಬ ಯುವಕ ಹೇಳಿದನು– ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ (ಶಿಷ್ಯ) ಆಗಿದ್ದೇನೆ. ಆದರೆ ನನಗೆ ಒಂದು ವಿಷಯ ಮಾತ್ರ ನೆನಪಿದೆ. ನಾನು ಚಿಕ್ಕವನಾಗಿದ್ದಾಗ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈ ಹಿಡಿದು ಹಸ್ತದಾನ ಮಾಡಿದೆನು. ಸ್ವಲ್ಪ ಸಮಯದ ತನಕ ಅವರ ಕೈ ಹಿಡಿದುಕೊಂಡೇ ನಿಂತಿದ್ದೆ. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನನ್ನ ಕೈ ಬಿಡಿಸಿ ಬೇರೆ ಕೆಲಸದಲ್ಲಿ ಮಗ್ನರಾದರು." ಇದೊಂದು ಚಿಕ್ಕ ಘಟನೆಯಾಗಿದ್ದರೂ ಅನಂತರ ಇಂತಹ ಘಟನೆಯಿಂದ ದೊಡ್ಡ ದೊಡ್ಡ ನಿಷ್ಕರ್ಷೆಗಳನ್ನು ಮಾಡಬಹುದಾಗಿದೆ. ಮೇಲಿನ ಘಟನೆಯನ್ನು ನೋಡಿರಿ. ದೊಡ್ಡವರ ಸಭೆಗಳಿಗೆ ಮಕ್ಕಳನ್ನು ತರಬಹುದೆಂದು ಅದರಿಂದ ಸಾಬೀತಾಗುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಜನರು ತಮ್ಮ ಮಕ್ಕಳನ್ನು ಸಭೆಗಳಿಗೆ ಕರೆದುಕೊಂಡು ಬರುತ್ತಿದ್ದರೆಂದು ತಿಳಿಯುತ್ತದೆ. ಮುಂದಿನ ಕಾಲದಲ್ಲಿ ಕೆಲವರು ಹೀಗೆ ಹೇಳಬಹುದು: ದೊಡ್ಡವರ ಸಭೆಗಳಿಗೆ ಮಕ್ಕಳನ್ನು ಕರೆತರುವುದೇಕೆ? ದೊಡ್ಡವರು ಮಾತ್ರ ಸಭೆ ಸೇರಿದರೆ ಸಾಕು ಎಂದು. ಇಂತಹ ಯೋಚನೆ ತಲೆದೋರಿದಾಗ ಮೇಲಿನ ಸಂಭವ ಅವರ ಯೋಚನೆಯನ್ನು ರದ್ದುಗೊಳಿಸುವುದು. ಇದಕ್ಕೆ ಬೆಂಬಲವಾಗಿ ಹದೀಸು ಸಹ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಭೆಗಳಿಗೆ ಸಹಾಬರು ತಮ್ಮ ಮಕ್ಕಳನ್ನು ಕರೆದುಕೊಂಡು ಬರುತ್ತಿದ್ದಾರೆಂದು ಹದೀಸುಗಳಲ್ಲಿದೆ. ಈ ಸಂಭವದಿಂದ ಇನ್ನೊಂದು ವಿಷಯ ಸಹ ಸ್ಪಷ್ಟವಾಗುತ್ತದೆ. ಅದೇನೆಂದರೆ ಯಾವುದಾದರೂ ಕೆಲಸಮಾಡಲಿಕ್ಕಿದ್ದರೆ ಕೈಬಿಡಿಸಿಕೊಂಡು ಕೆಲಸದಲ್ಲಿ ಮಗ್ನನಾಗಬಹುದೆಂದು. ಈಗ ನಾವು ಈ ವಿಷಯಗಳಿಗೆ ಮಹತ್ವ ನೀಡುವುದಿಲ್ಲ. ಆದರೆ ಮುಂದೆ ಅಹ್ಮದಿ ಫಿಖ್‌ಹ್ (ಕರ್ಮಶಾಸ್ತ್ರ), ಅಹ್ಮದಿ ತಸವ್ವುಫ್, ಅಹ್ಮದಿ ಫಿಲಾಸಫಿ ಸಿದ್ಧಪಡಿಸುವಾಗ ಇಂತಹ ಸಾಮಾನ್ಯ ಘಟನೆಗಳು ಮುಖ್ಯ ಸಾಕ್ಷ್ಯಾಧಾರವಾಗುವುವು. ಮಾತ್ರವಲ್ಲ ಈಗ ಸಹ ಅವುಗಳ ಆವಶ್ಯಕತೆಯನ್ನು ನಾವು ಮನಗಾಣುತ್ತಿದ್ದೇವೆ. ಮುಂದೆ ಒಂದು ಕಾಲದಲ್ಲಿ ದೊಡ್ಡ ದೊಡ್ಡ ದಾರ್ಶನಿಕರು ಈ ಸಂಭವಗಳನ್ನು ಓದುವಾಗ ಆಶ್ಚರ್ಯಚಕಿತರೂ ಸಂತೋಷ ಭರಿತರೂ ಆಗುವರು. ಈ ಘಟನೆ ವರದಿ ಮಾಡಿದವರಿಗೆ ಅಲ್ಲಾಹನು ಪ್ರತಿಫಲ ನೀಡಲಿ ಎಂದು ಅವರು ಪ್ರಾರ್ಥಿಸುವರು. ಬಿಕ್ಕಟ್ಟಿನ ಒಂದು ಸಮಸ್ಯೆಗೆ ನಮಗೆ ಇದರಿಂದ ಪರಿಹಾರ ದೊರೆತಿದೆ ಎಂದು ಅವರು ಹೇಳುವರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಹೇಳುತ್ತಾರೆ: "ಇಂತಹ ಒಂದು ಘಟನೆ ಹದೀಸಿನಲ್ಲಿ ವರದಿಯಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ

ವಸಲ್ಲಮರು ಒಮ್ಮೆ ನಮಾಝ್‌ನಲ್ಲಿ ಸುಜೂದ್ ಮಾಡಿದ್ದಾಗ ಚಿಕ್ಕ ಮಗುವಾಗಿದ್ದ ಹಝ್ರತ್ ಹಸನ್ ರಝಿಯಲ್ಲಾಹು ಅನ್‌ಹು ಅವರ ಕೊರಳಿನ ಮೇಲೆ ಕಾಲುಗಳನ್ನು ತೂಗಾಡಿಸಿ ಕುಳಿತರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಗು ಎದ್ದು ಹೋಗುವ ತನಕ ತಲೆ ಮೇಲೆತ್ತಿರಲಿಲ್ಲ. ಈಗ ಯಾರಾದರೂ ಹೀಗೆ ಮಾಡಿದರೆ ಕೆಲವರು ಹೇಳಬಹುದು- "ಆ ಮನುಷ್ಯನಿಗೆ ಧರ್ಮವೇನೆಂದು ಗೊತ್ತಿಲ್ಲ. ದೇವನ ಬಗ್ಗೆ ಕಾಳಜಿ ಹೊಂದದೆ ಮಗುವಿನ ಭಾವನೆಗಳಿಗೆ ಆದ್ಯತೆ ನೀಡಿದನು ಎಂದು ಹೇಳಬಹುದು. ಆದರೆ ಮೇಲಿನ ಘಟನೆ ಓದುವುದಾದರೆ ತನ್ನ ಯೋಚನೆ ತಪ್ಪೆಂದು ಅವನಿಗೆ ತಿಳಿಯುವುದು."

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಚಿಕ್ಕಪುಟ್ಟ ವಿಷಯ ನಿಮಗೆ ತಿಳಿದಿದ್ದರೂ ಅದನ್ನು ಬಹಿರಂಗ ಪಡಿಸಬೇಕು. ಉದಾಹರಣೆಗೆ ನಡೆಯುತ್ತಾ ಹೋಗುವಾಗ ಹುಲ್ಲಿನ ಮೇಲೆ ಕುಳಿತರು ಎಂಬ ಘಟನೆ ನಿಮಗೆ ತಿಳಿದಿದ್ದರೆ ಅದನ್ನು ಸಹ ವರದಿ ಮಾಡಬೇಕು. ಏಕೆಂದರೆ ಮುಂದೆ ಇಂತಹ ವಿಷಯಗಳಿಂದ ಮುಖ್ಯ ನಿಷ್ಕರ್ಷೆ ಮಾಡಲಾಗುವುದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನಗೆ ನೆನಪಿದೆ ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ನೇಹಿತರೊಂದಿಗೆ ತೋಟಕ್ಕೆ ಹೋದಾಗ ಹೇಳಿದರು ನಾವು ಬೇದಾನಹಣ್ಣು ತಿನ್ನುವ ಎಂದು. ಆಗ ಕೆಲವರು ನೆಲದ ಮೇಲೆ ಚಾದರನ್ನು ಹಾಸಿದರು. ಮರವನ್ನು ಅಲುಗಾಡಿಸಿದಾಗ ಹಣ್ಣುಗಳು ಕೆಳಗೆ ಬಿದ್ದುವು. ಎಲ್ಲರೂ ಒಟ್ಟಿಗೆ ಸೇರಿ ಹಣ್ಣು ತಿಂದರು. ಮುಂದಿನ ಕಾಲದಲ್ಲಿ ದುರಹಂಕಾರಿಗಳಾದ ಜನರು ಅನ್ಯರೊಂದಿಗೆ ಸೇರಿ ತಿನ್ನುವುದನ್ನು ಅಪಮಾನಕರವೆಂದು ಭಾವಿಸುವುದಾದರೆ ಅವರ ಮುಂದೆ ಈ ಘಟನೆಯನ್ನು ಹೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಸ್ಸಂಕೋಚವಾಗಿ ತನ್ನ ಸ್ನೇಹಿತರ ಜೊತೆಗೂಡಿ ತಿನ್ನುತ್ತಿದ್ದರು, ನೀವು ಹಾಗೆ ಮಾಡುವುದು ಅಪಮಾನಕರವೆಂದು ಭಾವಿಸುವುದಾದರೂ ಹೇಗೆ? ಎಂದು ಕೇಳಬಹುದು. ಹಾಗೆ ಕೆಲವು ವಿಷಯಗಳು ಚಿಕ್ಕದಾಗಿದ್ದರೂ ಮುಂದಿನ ಕಾಲದಲ್ಲಿ ಅವುಗಳ ಮೂಲಕ ಅನೇಕ ಮುಖ್ಯ ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ಸಮಸ್ಯೆಗಳು ಪರಿಹಾರಗೊಳ್ಳುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಂಡವರು, ಅವರ ಜೊತೆ ಕುಳಿತರು ಪ್ರತಿಯೊಂದು ವಿಷಯವನ್ನು ಬರೆದಿಡಬೇಕು. ಅವರ ಬಟ್ಟೆಬರೆಗಳ ಬಗ್ಗೆ ತಿಳಿದವರು ಅದನ್ನು ಸಹ ಬರೆದು ಇಲ್ಲಿಗೆ ಕಳುಹಿಸಬೇಕಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈರೀತಿ ಹೇಳಿದ ನಂತರ ಸಹಾಬರು ಅನೇಕ ಘಟನೆಗಳನ್ನು ಬರೆದಿಡಲು ಪ್ರಾರಂಭಿಸಿದರು. ಹಾಗೂ ಅವುಗಳ ದಾಖಲೆಗಳನ್ನು ಸಿದ್ಧಪಡಿಸಲಾಗಿದೆ. ಅವುಗಳ ಬಗ್ಗೆ ನಾನು ಮೊದಲೊಮ್ಮೆ ಪ್ರಸ್ತಾಪಿಸಿದ್ದೆ. ಅವುಗಳೆನ್ನೆಲ್ಲಾ ಜಮಾಅತಿನ ಮುಂದೆ ತರಲಾಗುವುದು- ಇನ್‌ಶಾಅಲ್ಲಾಹ್.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಸಹಾಬರ ವರದಿಗಳಿಂದ ಖಂಡಿತವಾಗಿಯೂ ಪ್ರಯೋಜನ ಸಿಗುವುದು. ಒಬ್ಬನು ಬರಿತಲೆಯಲ್ಲಿ ನಮಾಝ್ ಮಾಡುವ ಬಗ್ಗೆ ಹೇಳಿದರೆ ಅವನ ಅಭಿಪ್ರಾಯವನ್ನು ಸರಿಪಡಿಸಬಹುದು. ನಿಸ್ಸಂಶಯವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳು ನಮ್ಮ ಮುಂದಿವೆ. ಅವುಗಳಲ್ಲಿ ಈ ವಿಷಯದ ಪ್ರಸ್ತಾಪ ಸಹ ಇದೆ. ಕೆಲವರು ಬರಿತಲೆಯಲ್ಲಿ ನಮಾಝ್ ಮಾಡುತ್ತಾರೆ. ಅಂತಹ ಜನರಿಗೆ ಈ ವರದಿಗಳಿಂದ ಪ್ರಯೋಜನವಾಗಬಹುದು. ವರದಿಗಳಲ್ಲಿ ಮಸ್‌ಜಿದ್‌ಗಳ ಶಿಷ್ಟಾಚಾರ, ನಮಾಝ್‌ನ ಶಿಷ್ಟಾಚಾರಗಳು, ಸಭೆಗಳ ಶಿಷ್ಟಾಚಾರಗಳು ಇತ್ಯಾದಿಗಳನ್ನು ವಿವರಿಸಲಾಗಿದೆ.

ಈ ಕಾಲದಲ್ಲಿ ದೇವನು ನಿಯೋಗಿಸಿದವರ ಮಾತು ಶರೀಅತ್ ತಂದಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ದೃಢೀಕರಿಸುತ್ತದೆ. ಇಂದಿನ ಕಾಲದಲ್ಲಿ ಇಮಾಮ್ ಅಬೂ ಹನೀಫರವರ ಫಿಖ್‌ಹ್ (ಕರ್ಮ ಶಾಸ್ತ್ರ) ಅನುಸರಿಸಲ್ಪಡುತ್ತದೆ. ಮುಂದೊಂದು ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಯಾವ ಹದೀಸುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಯವೆಂದು ಸ್ಥಾಪಿಸಿರುವರೋ ಅವುಗಳನ್ನು ಮಾತ್ರ ಜನರು ಸತ್ಯವಾದ ಹದೀಸೆಂದು ಗಣಿಸಲ್ಪಡುವ ಕಾಲ ಬರಲಿದೆ. ಯಾವ ಹದೀಸುಗಳನ್ನು ಕೃತ್ರಿಮ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರೋ ಅವುಗಳನ್ನು ಸುಳ್ಳೆಂದು ಜನರು ಪರಿಗಣಿಸುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ವಿಷಯಗಳು ಹದೀಸುಗಳ ಹಾಗೆಯೇ ಮುಖ್ಯವಾಗಿವೆ. ಏಕೆಂದರೆ ಅವುಗಳ ಮೂಲಕ ಹದೀಸುಗಳ ಸತ್ಯಾಸತ್ಯತೆ ಬಹಿರಂಗಗೊಳ್ಳುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಮಾಮ್ ಬುಖಾರಿಗೆ ಇಂದು ಲೋಕದಲ್ಲಿ ಎಷ್ಟು ಗೌರವ ಲಭಿಸಿದೆ. ಇದಕ್ಕೆ ಕಾರಣವೇನೆಂದರೆ ಅವರು ಅನ್ಯರಿಂದ ವರದಿಗಳನ್ನು ಸಂಗ್ರಹಿಸಿದರು. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬರ ಮಕ್ಕಳು ತಮಗೆ ತಮ್ಮ ಹಿರಿಯರಿಂದ ದೊರೆತ ಮಾಹಿತಿಗಳ ವರದಿಯನ್ನು ನೀಡಬೇಕು. ಅವು ಸರಿಯೆಂದು ಬೇರೆ ವರದಿಗಳಿಂದಲೂ ಸಾಬೀತಾದರೆ ಅವುಗಳನ್ನು ದಾಖಲೆಗೆ ಸೇರಿಸಲಾಗುವುದು. ಕೆಲವು ವರದಿಗಳು ಪೂರ್ಣ ರೂಪದಲ್ಲಿ ದಾಖಲಿಸಲ್ಪಟ್ಟಿಲ್ಲವಾದರೆ ಅವುಗಳನ್ನು ಸಹ ಹಾಗೆಯೇ ಬರೆದು ಕಳುಹಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯ ಜ್ಞಾನ ವರ್ಧಿತವಾಗಿರುತ್ತದೆ. ಅವುಗಳು ನಮ್ಮ ಕರ್ಮಗಳ ತರಬೇತಿಗೆ ಆವಶ್ಯಕವಾಗಿವೆ. ಅವುಗಳಿಂದ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಸಿಗುತ್ತದೆ. ಹದೀಸಿನ ವ್ಯಾಖ್ಯಾನ ಸಹ ಸಿಗುತ್ತದೆ. ಅದರಿಂದ ಅಹ್ಮದಿಯರು ಲಾಭ ಪಡೆದು ಅವುಗಳನ್ನು ಸಂಗ್ರಹಿಸಿದವರ ಪರವಾಗಿ ಪ್ರಾರ್ಥಿಸುವರು.

ನಾನು ಒಂದು ವಿಷಯ ವಿವರಿಸುತ್ತೇನೆ. ಅದು ಕೆಲವು ಪ್ರಶ್ನೆ ಕೇಳುವವರಿಗೆ ಉತ್ತರ ನೀಡುವಂತಹದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಆರಂಭದಿಂದಲೇ ಇಸ್ಲಾಮ್ ಧರ್ಮದ ಅಭಿವೃದ್ಧಿ ಬಗ್ಗೆ ಉತ್ಸಾಹವಿತ್ತು. ಅದಕ್ಕಾಗಿ ಮೊತ್ತಮೊದಲು ಮುಸ್ಲಿಮರು ತಮ್ಮ ಕರ್ಮಗಳನ್ನು ಸುಧಾರಣೆ ಮಾಡಬೇಕೆಂದು ಅವರು ಬಯಸಿದ್ದರು. ಅದಕ್ಕೆ ಮುಖ್ಯವಾದುದು ಆರಾಧನೆಯ ಬಗ್ಗೆ ನಿಷ್ಠೆಯಾಗಿದೆ. ಆದುದರಿಂದ ಖಾದಿಯಾನಿನಲ್ಲಿ ವಾಸಿಸುತ್ತಿದ್ದ ಮುಸ್ಲಿಮರು ಮಸ್‌ಜಿದ್‌ಗೆ ಬಂದು ನಮಾಝ್ ಅನುಷ್ಠಿಸಲು ಅವರು ಒಂದು ವ್ಯವಸ್ಥೆ ಮಾಡಿದ್ದರು. ಅವರು ಸ್ವತಃ ಜನರನ್ನು ಮಸ್‌ಜಿದ್‌ಗೆ ಬರಲು ಹೇಳಿಕಳುಹಿಸಿ

ಆಮಂತ್ರಿಸುತ್ತಿದ್ದರು. ಅಲ್ಲಿ ಹೆಚ್ಚಿನ ಜನರು ಕೃಷಿ ವೃತ್ತಿಯವರಾಗಿದ್ದರು. ಬಡವರಾಗಿದ್ದರು. ಆದ ಕಾರಣ ಅವರು ನೆವನ ಹೇಳುತ್ತಿದ್ದರು: ನಮಾಝ್ ಮಾಡುವುದು ಶ್ರೀಮಂತರ ಕೆಲಸವಾಗಿದೆ. ನಮ್ಮ ಕೆಲಸವಲ್ಲ. ಬಡವರಾದ ನಾವು ಸಂಪಾದನೆಗೆ ಹೋಗಬೇಕೋ ಅಥವಾ ನಮಾಝ್‌ಗೆ ಹೋಗಬೇಕೋ? ನಾವು ಕೂಲಿ ಕೆಲಸ ಮಾಡದೆ ಐದು ಹೊತ್ತು ನಮಾಝ್ ಮಾಡುತ್ತಾ ಇದ್ದರೆ ಹೇಗೆ ಎಂದು ಕೇಳುತ್ತಿದ್ದರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಹೇಳಿದರು– ನಮಾಝ್ ಮಾಡಲು ಬಂದರೆ ನಿಮಗೆ ಇಲ್ಲಿ ಒಂದು ಹೊತ್ತಿನ ಊಟ ನೀಡಲಾಗುವುದು. ಈ ಪ್ರಕಟಣೆಯ ನಂತರ ಊಟ ಸಿಗುವ ಕಾರಣ 25–30 ಜನ ಮಸ್‌ಜಿದ್‌ಗೆ ಬರಲು ತೊಡಗಿದರು. ಅನಂತರ ಸೋಮಾರಿತನದಿಂದ ಕೇವಲ ಮಗ್‌ರಿಬ್ ನಮಾಝ್‌ಗೆ ಮಾತ್ರ ಬರಲು ತೊಡಗಿದರು. ಯಾಕೆಂದರೆ ಆಗ ಊಟ ಹಂಚಲಾಗುತ್ತಿತ್ತು. ಕೊನೆಗೆ ಈ ವ್ಯವಸ್ಥೆ ಕೊನೆಗೊಂಡಿತು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನೋಡಿರಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಉತ್ಸಾಹ ಏಕೆ ಇತ್ತು? ಇಸ್ಲಾಮಿನ ವಾಸ್ತವಿಕ ಚಿತ್ರ ಗೋಚರಿಸಬೇಕೆಂದು ಅವರು ಬಯಸಿದ್ದರು. ಅವರಿಗೆ ಈ ಉತ್ಸಾಹ ತನ್ನ ವಾದಗಳ ಮೊದಲು ಸಹ ಇತ್ತು; ಅನಂತರ ಸಹ ಇತ್ತು. ಮಸ್‌ಜಿದ್‌ಗೆ ಬಂದು ಸಾಮೂಹಿಕ (ಬಾಜಮಾಅತ್) ನಮಾಝ್ ಅನುಷ್ಠಿಸಬೇಕೆಂದು ಅವರು ಇಚ್ಛಿಸುತ್ತಿದ್ದರು. ಮಸ್‌ಜಿದ್ ಜನರಿಂದ ತುಂಬಬೇಕೆಂದು ಅವರು ಬಯಸಿದ್ದರು.

ಅಲ್ಲಾಹನ ಅನುಗ್ರಹದಿಂದ ಈಗ ನಮ್ಮ ಮಸ್‌ಜಿದ್‌ಗಳು ಲೋಕದಲ್ಲಿ ವಿವಿಧ ಸ್ಥಳಗಳಲ್ಲಿ ನಿರ್ಮಾಣಗೊಳ್ಳುತ್ತಿವೆ. ಆದರೆ ಅವುಗಳನ್ನು ಜನಭರಿತವನ್ನಾಗಿ ಮಾಡಲು ಎಷ್ಟು ಲಕ್ಷ್ಯ ನೀಡಬೇಕಾಗಿದೆಯೋ ಅಷ್ಟು ಲಕ್ಷ್ಯ ನೀಡಲಾಗುತ್ತಿಲ್ಲ. ಕೆಲವು ಸ್ಥಳಗಳಿಂದ ದೂರುಗಳು ಬರುತ್ತಿವೆ. ರಬ್ವದಲ್ಲಿ, ಖಾದಿಯಾನ್‌ನಲ್ಲಿ ಮತ್ತು ಪಾಕಿಸ್ಥಾನದ ವಿವಿಧ ಮಸ್‌ಜಿದ್‌ಗಳಲ್ಲಿ ಅಲ್ಲಿರುವ ಅಹ್ಮದಿಯರು ಮಸ್‌ಜಿದ್‌ಗಳನ್ನು ಜನಭರಿತವಾಗಲು ಪ್ರಯತ್ನಿಸಬೇಕಾಗಿದೆ. ಇದೇರೀತಿ ವಿವಿಧ ದೇಶಗಳಲ್ಲಿರುವ ಮಸ್‌ಜಿದ್‌ಗಳು ಜನರಿಂದ ತುಂಬುವಂತೆ ಮಾಡಬೇಕಾಗಿದೆ. ಕೆಲವರು ನನಗೆ ಬರೆಯುತ್ತಾರೆ: ಮಸ್‌ಜಿದ್‌ಗೆ ಯುವ ಜನರನ್ನು ತರಲು ಅಲ್ಲಿ ಆಟಗಳ ವ್ಯವಸ್ಥೆ ಮಾಡಲಾಗುತ್ತದೆ ಎಂದು. ಆಟಗಳ ಆಶೆ ನೀಡಿ ಅವರನ್ನು ನಮಾಝ್ ಮಾಡಲು ಪ್ರೇರೇಪಿಸಲಾಗುತ್ತದೆ. ಆದರೆ ಇದು ತಪ್ಪು ಕೆಲಸವೇನೂ ಅಲ್ಲ. ಕೆಲವು ಕಾರ್ಯಕ್ರಮಗಳನ್ನು ಏರ್ಪಡಿಸಿ ಊಟದ ವ್ಯವಸ್ಥೆ ಮಾಡುತ್ತಾರೆಂದು ಸಹ ಆಕ್ಷೇಪಿಸುತ್ತಾರೆ. ಈ ಆಕ್ಷೇಪಗಳೆಲ್ಲಾ ದುರಾಲೋಚನೆಗಳಾಗಿವೆ. ಮಸ್‌ಜಿದ್‌ನೊಂದಿಗೆ ಆಟದ ಹಾಲ್ ನಿರ್ಮಿಸುವುದು ತಪ್ಪೇನೂ ಅಲ್ಲ. ಕೆಲವು ಮುರಬ್ಬಿಗಳು ಯುವಕರಾಗಿರುತ್ತಾರೆ. ಅವರು ಸ್ವತಃ ಆಟ ಆಡುತ್ತಾರೆ. ಅವರು ಯುವಕರನ್ನು ಜಮಾಯಿಸುತ್ತಾರೆ. ಈ ಕಾರಣದಿಂದ ಒಂದೆರಡು ನಮಾಝ್‌ಗಳಿಗಾದರೂ ಮಸ್‌ಜಿದ್‌ನಲ್ಲಿ ಜನರು ಜಮಾಯಿಸುವಂತೆ ಆಗುತ್ತದೆ. ಆದುದರಿಂದ ಮಸ್‌ಜಿದ್ ಬಳಿ ಆಟದ ಹಾಲ್ ನಿರ್ಮಿಸುವುದು ಅಪರಾಧವೆಂದು ಹೇಳುವುದು ಸರಿಯಾಗಲಾರದು. ಕೆಲವು ಕಾರ್ಯಕ್ರಮಗಳಿಗೆ ಜನರನ್ನು ಜಮಾಯಿಸಲಿಕ್ಕಾಗಿ ಊಟದ ವ್ಯವಸ್ಥೆ ಮಾಡುವುದೇಕೆ ಎನ್ನುವುದು ಸಹ ತಪ್ಪು ಆಕ್ಷೇಪವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಡೆವಳಿಕೆಯಿಂದ ನಮಗೆ ತಿಳಿಯುವುದೇನೆಂದರೆ ಹೀಗೆ ಮಾಡಬಹುದು ಅದರಲ್ಲಿ ತಪ್ಪೇನೂ ಇಲ್ಲ ಎಂದಾಗಿದೆ.

(ಖುತ್‌ಬದ ಕೊನೆಯಲ್ಲಿ ಹುಝೂರ್ ಇಬ್ಬರು ಮೃತರ ಬಗ್ಗೆ ಪ್ರಸ್ತಾಪಿಸಿ ನಮಾಝೆ ಜನಾಝ ಗಾಯಿಬ್ ಅನುಷ್ಠಿಸುವ ಬಗ್ಗೆ ಹೇಳಿದರು. ಜನಾಬ್ ಹಾಜಿ ಯಾಕೂಬ್ ಸಾಹೇಬ್ ಘಾನದಲ್ಲಿ 30–8–2015ರಂದು ನಿಧನ ಹೊಂದಿದ್ದರು. إِنَّا لِلّٰهِ وَإِنَّا إِلَيْهِ رَاجِعُونَ. ಅವರ ಪ್ರಾಯ ಒಂದು ನೂರಕ್ಕಿಂತ ಹೆಚ್ಚಾಗಿತ್ತು. ಅವರು ಮಾಡಿದ ಸೇವೆಗಳನ್ನು ವಿವರಿಸಲಾಯಿತು. ಅವರ ಇಬ್ಬರು ಪುತ್ರರಲ್ಲಿ ಒಬ್ಬರು ಕೇಂದ್ರದ ಮುಬಲ್ಲಿಗರೂ ಇನ್ನೊಬ್ಬರು ಸ್ಥಳೀಯ ಮಿಶನರಿಯೂ ಆಗಿದ್ದಾರೆ. ಇನ್ನೊಬ್ಬ ಮೃತರು ಮೌಲಾನ ಫಝ್ಲ್ ಇಲಾಹಿ ಬಶೀರ್ ಸಾಹೇಬರು. ಅವರು 3–8–2015ರಂದು 97ನೇ ವಯಸ್ಸಿನಲ್ಲಿ ರಬ್ವದಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ. ಅವರು ಪೆಲೆಸ್ತೀನ್ ಮತ್ತು ಮೌರಿಶಶ್‌ನಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಇವರಿಬ್ಬರ ಆಧ್ಯಾತ್ಮಿಕ ಉನ್ನತಿಗೆ ಪ್ರಾರ್ಥಿಸಲು ಹುಝೂರ್ ಹೇಳಿದರು. ಅವರ ಮಕ್ಕಳು ಅವರನ್ನು ಅನುಸರಿಸುವ ಭಾಗ್ಯ ನೀಡಲು ಪ್ರಾರ್ಥಿಸಲು ಹೇಳಿದರು.)

–––––––––––––––*****––––––––––––––

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 18-09-2015.*

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk, Qadian

***Reviewed by****:* M.P Ibrahim | ***Typing****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon